# ವೀರಭಕ್ತ ಗಿರೀಶ್‌ಚಂದ್ರ ಘೋಷ್

ಪ್ರವ್ರಾಜಿಕಾ ಪರಮಪ್ರಾಣಾ

*(ಹಿಂದಿನ ಸಂಚಿಕೆಯಿಂದ)*

ಶ್ರೀರಾಮಕೃಷ್ಣರಿಗೆ ತನ್ನನ್ನು ಸಮರ್ಪಿಸಿಕೊಳ್ಳಲು ಗಿರೀಶನ ಮನಸ್ಸೂ ಪರಿಪಕ್ವವಾಗಿತ್ತು. ಈ ಸಂದರ್ಭದಲ್ಲಿ ಶರತ್‌ಚಂದ್ರ ಚಕ್ರವರ್ತಿ ಹಾಗೂ ಸ್ವಾಮಿ ವಿವೇಕಾನಂದರ ನಡುವಿನ ಒಂದು ಸಂಭಾಷಣೆ ನೆನಪಿಗೆ ಬರುತ್ತದೆ.

**ಶರಚ್ಚಂದ್ರ:** "ಮಹಾಶಯರೇ, ಯಾರನ್ನು ನಾವು ಪಾಪಿ, ವ್ಯಭಿಚಾರಿ ಎಂದು ಅಂದುಕೊಳ್ಳುತ್ತೇವೆಯೋ ಅಂಥ ಕೆಲವು ವ್ಯಕ್ತಿಗಳು ಯಾವುದೇ ರೀತಿಯ ಸಾಧನೆ, ಭಜನೆ ಮಾಡದೆಯೇ ಮಹಾಪುರುಷರ ಕೃಪೆಯಿಂದ ಈಶ್ವರಲಾಭವನ್ನು ಪಡೆಯಲು ಸಮರ್ಥರಾಗುತ್ತಾರೆ. ಅವತಾರಪುರುಷರ ಜೀವನದಲ್ಲಿ ಇಂಥ ಕೆಲವು ಘಟನೆಗಳ ಉಲ್ಲೇಖವೂ ಇದೆ, ಇವೆಲ್ಲದರ ಅರ್ಥ ಏನು?"

**ಸ್ವಾಮೀಜಿ:** "ಅಂಥ ವ್ಯಕ್ತಿಗಳ ಮನಸ್ಸಿನಲ್ಲಿ ಭಯಾನಕ ಅಶಾಂತಿ ಉಂಟಾಗಿರುತ್ತದೆ. ಭೋಗಸುಖವನ್ನು ಮಿತಿಮೀರಿ ಅನುಭವಿಸುತ್ತ ಕೊನೆಯಲ್ಲಿ ಭೋಗಲಾಲಸೆಯ ಬಗ್ಗೆಯೇ ಹೇಸಿಗೆಯಾಗತೊಡಗುತ್ತದೆ. ಅಶಾಂತಿಯಿಂದ ಅವರ ಹೃದಯ ಬೇಯುತ್ತಿರುತ್ತದೆ. ಹೃದಯದಲ್ಲಿ ತೀವ್ರವಾದ ಶೂನ್ಯಭಾವನೆ ಇರುತ್ತದೆ. ಇದರಿಂದಲೇ ಅವರ ಮೇಲೆ ಭಗವಂತನ ದಯೆ ಉಂಟಾಗುತ್ತದೆ. ತಮೋಗುಣದ ನಡುವಿನಿಂದಲೇ ಇಂಥ ವ್ಯಕ್ತಿಗಳು ಧರ್ಮಮಾರ್ಗದ ಮೇಲೇರಿ ಹೋಗುತ್ತಾರೆ." (*ಸ್ವಾಮಿ ಶಿಷ್ಯ ಸಂವಾದ,* ೬ ನೆಯ ಮುದ್ರಣ, ಪು. ೧೫೪)

ಗಿರೀಶ್ ತನ್ನ ಒಂದು ಲೇಖನದಲ್ಲಿ ಹೀಗೆ ಬರೆಯುತ್ತಾನೆ: "ನನ್ನ ಮನಸ್ಸಿನ ಸ್ಥಿತಿ ವರ್ಣನಾತೀತವಾಗಿತ್ತು. ಕಣ್ಣಿಗೆ ಬಟ್ಟೆ ಕಟ್ಟಿ ಕತ್ತಲಿನ ಕೋಣೆಯಲ್ಲಿ ಕೂಡಿಹಾಕಿದ ಮನುಷ್ಯನ ಸ್ಥಿತಿಯನ್ನು ನನ್ನ ಮನಸ್ಸಿನ ಅವಸ್ಥೆಯೊಂದಿಗೆ ಸ್ವಲ್ಪಮಟ್ಟಿಗೆ ಹೋಲಿಸಬಹುದು. (ನಾನು) ಮಾಡಿದ ಕೆಟ್ಟ ಕೆಲಸಗಳೆಲ್ಲಾ ಒಮ್ಮೊಮ್ಮೆ ನೆನಪಿನಲ್ಲಿ ಪೂರ್ಣವಾಗಿ ಜಾಗೃತವಾಗಿ ಮನಸ್ಸಿನ ಅಂಧಕಾರವನ್ನು ಮತ್ತೂ ಗಾಢವಾಗುವಂತೆ ಮಾಡಿಬಿಡುತ್ತಿದ್ದವು."

ಗಿರೀಶನಂಥ ಸ್ವತಂತ್ರ ಮನೋಭಾವದ ವ್ಯಕ್ತಿಯನ್ನು ರಾಮಕೃಷ್ಣರು ಸಂಪೂರ್ಣವಾಗಿ ತಮ್ಮ ನಿಯಂತ್ರಣಕ್ಕೆ ತಂದಿದ್ದರು. 'ಶ್ರೀರಾಮಕೃಷ್ಣರ ಶಿಷ್ಯಸ್ನೇಹ' ಎಂಬ ಪ್ರಬಂಧದಲ್ಲಿ ಗಿರೀಶ್ ಬರೆಯುತ್ತಾನೆ, "ಶಿಕ್ಷಣ ನೀಡುವಲ್ಲಿ ಶ್ರೀರಾಮಕೃಷ್ಣರು ಅನುಸರಿಸುತ್ತಿದ್ದ ಪದ್ಧತಿ ಅನುಪಮವಾದದ್ದು. ಚಿಕ್ಕ ಹುಡುಗನಾಗಿರುವಾಗಲೇ ಯಾರಾದರೂ, 'ಈ ಕೆಲಸ ಮಾಡಬೇಡ' ಎಂದರೆ ನಾನು ಅದನ್ನೇ ಮೊದಲು ಮಾಡಿ ಮುಗಿಸುತ್ತಿದ್ದೆ. ರಾಮಕೃಷ್ಣರು ಒಂದೇ ಒಂದು ದಿನವಾದರೂ ನಿಷೇಧಾತ್ಮಕವಾದ ಒಂದು ಮಾತನ್ನೂ ಹೇಳಲಿಲ್ಲ. ಅವರು ಸುಳ್ಳು ಹೇಳದಿರುವಂತೆ ಎಲ್ಲರಿಗೂ ಹೇಳುತ್ತಿದ್ದರು. ನಾನೊಮ್ಮೆ ಹೇಳಿದೆ, 'ಮಹಾಶಯರೇ, ನಾನು ಆಗಾಗ ಸುಳ್ಳು ಹೇಳುತ್ತಿರುತ್ತೇನೆ.' ಅವರೆಂದರು, 'ನೀನು ಆ ಬಗ್ಗೆ ಚಿಂತಿಸಬೇಡ. ನೀನು ಸತ್ಯ ಮಿಥ್ಯೆಗಳೆರಡನ್ನೂ ಮೀರಿ ಹೋಗಿಬಿಟ್ಟಿರುವೆ.' "


ರಾಮಕೃಷ್ಣರ ಎದುರಿಗೆ, ಮನಸ್ಸು ಬಿಚ್ಚಿ ತನ್ನೊಳಗಿನ ಕುಂದು ಕೊರತೆಗಳನ್ನು ಹೇಳಿಕೊಂಡು ಗಿರೀಶ್ ಪರಿಹಾರವನ್ನು ಯಾಚಿಸಿದ್ದು, ಒಂದು ರೀತಿಯಲ್ಲಿ ಅವರಿಗೆ ಶರಣಾದಂತೆಯೇ ಆಯಿತು. ಇದರ ಫಲವನ್ನು ಬಹುಬೇಗ ಆತ ಅನುಭವಿಸಬೇಕಾಯಿತು. ಆತ ಥಿಯೇಟರಿಗೆ ಹೋಗಲಿ, ಮನೆಯಲ್ಲಿರಲಿ, ಎಲ್ಲಿಗೆ ಹೋದರೂ ಏನು ಮಾಡುತ್ತಿದ್ದರೂ ರಾಮಕೃಷ್ಣರ ನೆನಪನ್ನು ಮನಸ್ಸಿನಿಂದ ಸರಿಸಲಾಗಲಿಲ್ಲ. ಗಿರೀಶ್ ಬರೆಯುತ್ತಾನೆ, "ರಾಮಕೃಷ್ಣರು ಸಂಪೂರ್ಣವಾಗಿ ನನ್ನ ಹೃದಯವನ್ನು ಆಕ್ರಮಿಸಿಕೊಂಡಿದ್ದಾರೆ. ಇದಕ್ಕೆ ಕಾರಣ ಅವರು ನನಗೆ ತೋರಿಸುತ್ತಿದ್ದ ಪ್ರೀತಿ ಸ್ನೇಹಗಳು. ಇಂಥ ವಾತ್ಸಲ್ಯವನ್ನು ನಾನೆಲ್ಲಿಯೂ ಅನುಭವಿಸಿಲ್ಲ. ಅವರು ನನ್ನ ಪಾಪವನ್ನು ಸ್ವೀಕರಿಸಿದ್ದಾರೆ." ಗಿರೀಶ್‌ಚಂದ್ರ ತನ್ನ ಕವಿತೆಯೊಂದರಲ್ಲಿ ಹೀಗೆ ನಿವೇದಿಸಿಕೊಳ್ಳುತ್ತಾನೆ:

**ತ್ಯಜಿ ಕನ್ಯಾ ಪುತ್ರ ನಾರಿ ಪಾನಾಸಕ್ತ ಅತ್ಯಾಚಾರಿ**
**ಲೋಕ ತ್ಯಾಜ್ಯ ಘೃಣಿತ ಜೀವನ್**
**ತವದ್ವಾರ ಮುಕ್ತ ತಾರ್ ಪತಿತ ಪಾವನ।**

"ಪಾನಾಸಕ್ತನಾಗಿ ನಿಯಂತ್ರಣವಿಲ್ಲದ ಜೀವನವನ್ನು ಕಂಡು ಸ್ವಂತ ಸಂಸಾರವೂ ದೂರ ಸರಿಯುತ್ತಿದೆ. ಜಗತ್ತು ಇಂಥ ಜೀವನವನ್ನು ಕಂಡು ಹೇಸುತ್ತಿದೆ. ಹೀಗಿರುವಾಗ ಪತಿತಪಾವನನೇ, ನಿನ್ನಿಂದ ಇಂಥ ಒಬ್ಬ ವ್ಯಕ್ತಿಯು ಮುಕ್ತಿಯನ್ನು ಪಡೆದನು."

ಗಿರೀಶ್ ಹಾಗೂ ರಾಮಕೃಷ್ಣರ ಏಳನೆಯ ಭೇಟಿ ದಕ್ಷಿಣೇಶ್ವರದಲ್ಲಿ ಆಯಿತು. ಗಿರೀಶ್ ಅವರಿಗೆ ಹೇಳಿದನು, "ನಾನೇ ಬೇಕಾದಷ್ಟು ಉಪದೇಶಗಳನ್ನು ಬರೆದಿದ್ದೇನೆ. ನನಗೆ ನಿಮ್ಮ ಉಪದೇಶಗಳು ಬೇಕಾಗಿಲ್ಲ. ನನ್ನಲ್ಲಿ ಏನಾದರೂ ಪರಿವರ್ತನೆ ತರಲು ಸಾಧ್ಯವಾದರೆ ತನ್ನಿ." ಇದಕ್ಕೆ ಉತ್ತರವಾಗಿ ರಾಮಕೃಷ್ಣರು ಎದುರಿಗಿದ್ದ ರಾಮಲಾಲನಿಗೆ ಹೇಳಿದರು, "ಆ ಶ್ಲೋಕವನ್ನು ಇವನೆದುರು ಹೇಳು." ರಾಮಲಾಲ ಹೇಳಿದ ಶ್ಲೋಕದ ಭಾವಾರ್ಥ ಇದು: "ಪರ್ವತಗಹ್ವರದಲ್ಲಿ, ನಿರ್ಜನ ಸ್ಥಳಗಳಲ್ಲಿ ಕುಳಿತು ಎಷ್ಟು ಸಾಧನೆ ಮಾಡಿದರೂ ಏನೂ ಸಿಗುವುದಿಲ್ಲ. ವಿಶ್ವಾಸ ಒಂದಿದ್ದರೆ ಸಾಕು. ಇದೇ ಸಾಧಕನನ್ನು ಉದ್ಧಾರ ಮಾಡಬಲ್ಲದು."

ರಾಮಕೃಷ್ಣರ ಎದುರಿನಲ್ಲಿ ಕುಳಿತು ಈ ಶ್ಲೋಕವನ್ನು ಕೇಳುತ್ತಿದ್ದಂತೆ ಗಿರೀಶನ ಮನಸ್ಸು ಹಗುರವಾಯಿತು. 'ಹಾಗಿದ್ದರೆ



ನಾಟಕವನ್ನು ಹೇಳಿ ಬರೆಸುತ್ತಿರುವ ಗಿರೀಶ್ ಘೋಷ್

ಇನ್ನೇನೂ ಬೇಕಾಗಿಲ್ಲ. ವಿಶ್ವಾಸವಿಟ್ಟರೆ ಸಾಕು. ಇನ್ನೆಂದೂ ಸಂದೇಹದ ಸುಳಿಗೆ ಸಿಕ್ಕಿಕೊಳ್ಳುವುದಿಲ್ಲ' ಎಂದು ಭಾವಿಸುತ್ತಾ ಗಿರೀಶ್ ಅವರನ್ನು ಪ್ರಶ್ನಿಸಿದನು, "ಇನ್ನು ಮುಂದೆ ನನ್ನ ಕರ್ತವ್ಯ ವೇನು?"

**ಶ್ರೀರಾಮಕೃಷ್ಣರು:** (ತಮ್ಮನ್ನು ತೋರಿಸಿ) "ಇಲ್ಲಿ ವಿಶ್ವಾಸ ವಿಡು. ಹಾಗೂ ಎಂದಿನಂತೆ ನಿನ್ನ ಎಲ್ಲಾ ಕೆಲಸಗಳನ್ನು ಮುಂದುವರಿಸು."

ಶ್ರೀರಾಮಕೃಷ್ಣರಲ್ಲಿ ಗಿರೀಶನಿಟ್ಟ 'ವಿಶ್ವಾಸ', ಅವನ ಜೀವನ ದಲ್ಲಿ ಸಂಪೂರ್ಣ ಪರಿವರ್ತನೆಯನ್ನು ತಂದಿತು. ಗಿರೀಶನ ಜೀವನದ ಆರಂಭದ ಕಾಲದಲ್ಲಿ ಅವಿಶ್ವಾಸದ, ಅಹಂಕಾರದ ತಾಂಡವವನ್ನು ಕಂಡರೆ, ಅವನ ಅನಂತರದ ಜೀವನದಲ್ಲಿ ನಾವು ಕಾಣುವುದು, ವಿಶ್ವಾಸದ ಶಕ್ತಿಯಲ್ಲಿ ಸ್ತಬ್ಧನಾದ, ನತಮಸ್ತಕನಾದ ಗಿರೀಶನನ್ನು. ಸ್ವಾಮಿ ವಿವೇಕಾನಂದರ ಶಿಷ್ಯರಲ್ಲಿ ಒಬ್ಬರಾದ ಸ್ವಾಮಿ ವಿಮಲಾನಂದರು 'ವಿಶ್ವಾಸ'ದ ವಿಚಾರವಾಗಿ ಹೇಳಿದ ಮಾತುಗಳು ಇಲ್ಲಿ ಸ್ಮರಣಯೋಗ್ಯವಾಗಿವೆ: "ವಿಶ್ವಾಸವೆಂದರೆ ವಿಪರೀತವಾದ ಭಾವೋದ್ವೇಗವಲ್ಲ ಅಥವಾ ಬುದ್ಧಿಯ ಮಟ್ಟದಲ್ಲಿ ಚಿಂತಿಸಿ ಗಳಿಸಿಕೊಳ್ಳುವಂಥದ್ದೂ ಅಲ್ಲ. ನಿಜವಾದ ವಿಶ್ವಾಸ ನಮ್ಮ ಅಂತರಂಗದಲ್ಲಿ ಅಚಲವಾದ ಶಕ್ತಿಯ ರೂಪದಲ್ಲಿ ನಿಂದಿರುತ್ತದೆ. ಇದು ಬಹು ದಿನಗಳ ಪ್ರಯತ್ನದ, ನಿಯಮ ನಿಷ್ಠೆಗಳ ಫಲ. ಇದರಿಂದ ಪಾರಮಾರ್ಥಿಕವಾದ ಸದ್ವಸ್ತುವಿನ ಜೊತೆಗೆ ಅಭೇದ್ಯ ಸಂಬಂಧ ಉಂಟಾಗುತ್ತದೆ. ಈ ಸಂಬಂಧ ಯಾವ ಅಂತರ್‌ದೃಷ್ಟಿಯ ಶಕ್ತಿಯಿಂದ ಅನುಭೂತಿಯಾಗಿ ನೆಲೆ ನಿಲ್ಲುತ್ತದೆಯೋ, ಅದೇ 'ವಿಶ್ವಾಸ'. ವಿಶ್ವಾಸದ ಶಕ್ತಿಯಿಂದ ಅಸಂಭವವೂ ಸಂಭವವಾಗುತ್ತದೆ." (*ಸ್ವಾಮಿಜೀರ್ ಪದಪ್ರಾಂತೆ*, ೧ ನೆಯ ಮುದ್ರಣ, ಪು. ೮೫)

ರಾಮಕೃಷ್ಣರ ಪರಿಚಯವಾಗುವ ಮೊದಲು ಗಿರೀಶ್, ಮಹಾಕಾವ್ಯಗಳು ಹಾಗೂ ಪುರಾಣ ಗಳನ್ನು ಆಧರಿಸಿ ನಾಟಕಗಳನ್ನು ಬರೆದಿದ್ದನು. ಇವು ನಾಟಕರೂಪಕ್ಕೆ ತಂದ ಪುರಾಣದ ಕಥೆಗಳು ಮಾತ್ರ. ರಾಮಕೃಷ್ಣರ ಪ್ರಭಾವಕ್ಕೆ ಬಂದ ಮೇಲೆ ಆತ ಪುರಾಣಗಳ ನವ್ಯ ವ್ಯಾಖ್ಯಾನಕಾರನಾಗಿ ಮಾರ್ಪಟ್ಟನು. ವೇದಾಂತದ ಸಂಸ್ಪರ್ಶದಿಂದ ಆತನಲ್ಲಿ ಹೊಸ ದೃಷ್ಟಿ ಜಾಗೃತವಾಯಿತು. ಜಗತ್ತಿನ ದುಃಖ, ಅನ್ಯಾಯಗಳ ಹಿಂದೆ ಆ ಅನಂತ ಭಾವಮಯ ಭಗವತ್‌ಶಕ್ತಿಯ ಆಟ ವನ್ನು ಆತ ಕಂಡುಕೊಂಡನು. ಆತನಲ್ಲೀಗ ಆಕ್ರೋಶವಿಲ್ಲ. ದುಃಖ ಅವನತಿಗಳ ಹಿಂದೆಯೂ ಶುಭದ ಆವಿರ್ಭಾವದ ಆಸೆ; ದುರ್ಬಲ, ಹೀನ ಅವಸ್ಥೆಯ ಮನುಷ್ಯನೂ ದೈವತ್ವವನ್ನು ಪಡೆಯಲು ಸಾಧ್ಯವೆಂಬ ವಿಶ್ವಾಸ ಆತನ ನಾಟಕಗಳಲ್ಲಿ ಮೂಡಿಬರಲಾರಂಭಿಸಿದವು. ಶ್ರೀಮತಿ ಗ್ರೇ ಹ್ಯಾಲಕ್ ಎಂಬ ವಿದೇಶೀ ಮಹಿಳೆ ಭಾರತವನ್ನು ಕಂಡು ತನ್ನ ದೇಶಕ್ಕೆ ಹಿಂತಿರುಗಿದ ನಂತರ ತನ್ನ ಆತ್ಮಕಥೆಯಲ್ಲಿ ಹೀಗೆ ಬರೆಯುತ್ತಾಳೆ: "ಆ ದೇಶದಲ್ಲಿ ಗಿರೀಶ್ ಘೋಷ್‌ನಂಥ ವ್ಯಕ್ತಿಯ ಪರಿಚಯವಾಯಿತು. ಭಾರತದ ವೇದಾಂತ ದರ್ಶನದ ಸಾರ್ಥಕ ಅಭಿವ್ಯಕ್ತಿ ಆತನ ನಾಟಕಗಳಲ್ಲಾಗಿದೆ. ಆತನ ರಚನೆಗಳು ಇಂಗ್ಲಿಷ್‌ಗೆ ಅನುವಾದಿತವಾಗಿದ್ದರೆ ರವೀಂದ್ರನಾಥ ಠಾಕೂರರ ಕೃತಿಗಳಿಗಿಂತ ಹೆಚ್ಚಾಗಿ ಪ್ರಚಾರಕ್ಕೆ ಒಳಗಾಗುತ್ತಿದ್ದವು ಎಂಬುದರಲ್ಲಿ ಸಂದೇಹವಿಲ್ಲ" (*ಪ್ರಬುದ್ಧ ಭಾರತ*, ಅಕ್ಟೋಬರ್ ೧೯೩೬).

೧೮೮೫, ಫೆಬ್ರವರಿ ೨೫ ರಂದು ಶ್ರೀರಾಮಕೃಷ್ಣರು 'ವೃಷಕೇತು' ನಾಟಕ ನೋಡಲು ಸ್ಟಾರ್ ಥಿಯೇಟರಿಗೆ ಹೋಗಿದ್ದರು. ಈ ಕೆಲವು ತಿಂಗಳುಗಳೊಳಗೇ ಗಿರೀಶನಲ್ಲಿ ಅದ್ಭುತ ಬದಲಾವಣೆ ಆಗಿತ್ತು. ಈ ವೇಳೆಗಾಗಲೇ ಶ್ರೀರಾಮಕೃಷ್ಣರು ಭಗವಂತನ ಅವತಾರ ಎಂಬ ದೃಢವಿಶ್ವಾಸ ಆತನಲ್ಲುಂಟಾಗಿತ್ತು. ಗಿರೀಶ್ ನಾಟಕ ರಂಗದಿಂದ ದೂರ ಸರಿಯಲು ಯೋಚಿಸುತ್ತಿರುವುದನ್ನು ಕಂಡು ಶ್ರೀರಾಮಕೃಷ್ಣರು ಹೇಳಿದರು, "ಹಾಗೆ ಮಾಡಬೇಡ. ಇದರಿಂದ ಬಹುಜನರಿಗೆ ಉಪಕಾರವಾಗುತ್ತದೆ."

(*ಮುಂದುವರಿಯುವುದು*)

**ವಿವೇಕಪ್ರಭದ ಚಂದಾದಾರರಲ್ಲಿ ವಿನಂತಿ**

ಪತ್ರಿಕೆಗೆ ಸಂಬಂಧಪಟ್ಟ ಮಾಹಿತಿಗೆ ಮತ್ತು ಪತ್ರಿಕೆ ತಲುಪದಿದ್ದರೆ, ಈ ಫೋನ್ ನಂಬರಿಗೆ ಕರೆ ಮಾಡಿ. (ಬೆಳಗ್ಗೆ 10.30 ರಿಂದ ಸಂಜೆ 5.00 ರವರೆಗೆ ಮಾತ್ರ, ರಜಾದಿನಗಳನ್ನು ಹೊರತುಪಡಿಸಿ.)

**9481533505 (ವೇಣುಗೋಪಾಲ್)**